# ಮರ್ಯಾದಾ ಪುರುಷೋತ್ತಮ ಶ್ರೀರಾಮ

● ಪ್ರೊಫೆಸರ್ ಎಂ.ಎನ್. ಗೋಪಾಲನ್

ಶ್ರೀಮದ್‌ರಾಮಾಯಣದಲ್ಲಿ ಆದಿಕವಿ ವಾಲ್ಮೀಕಿ ಚಿತ್ರಿಸಿರುವ ಶ್ರೀರಾಮನ ಚಿತ್ರ ಇತಿಹಾಸದುದ್ದಕ್ಕೂ ಲೆಕ್ಕವಿಲ್ಲದಷ್ಟು ಜನರಿಗೆ ಸ್ಫೂರ್ತಿದಾಯಕವಾಗಿದೆ. ಒಬ್ಬ ಆದರ್ಶ ವ್ಯಕ್ತಿಯಲ್ಲಿರಬೇಕಾದ ಸರ್ವೋತ್ಕೃಷ್ಟವಾದ ಗುಣಗಳನ್ನೆಲ್ಲಾ ಒಂದೆಡೆ ಕಲೆಹಾಕಿ ಮೂಡಿ ಬಂದ ಚಿತ್ರವೇ ಶ್ರೀರಾಮನದಾಗಿದೆ. ಶ್ರೀರಾಮನು ತಾನು ಪರಮಾತ್ಮನೇ ಆಗಿದ್ದರೂ ಸಹ ಸಾಮಾನ್ಯ ಮಾನವನಂತೆ ಕಷ್ಟ ಸುಖಗಳನ್ನು ಅನುಭವಿಸುತ್ತ ಬಾಳಿದ ಒಬ್ಬ ಮಹಾವ್ಯಕ್ತಿ. ಎಷ್ಟು ಕಷ್ಟ ಬಂದರೂ ಸಹ ಧರ್ಮಮಾರ್ಗವನ್ನು ಬಿಡದ, ಅಸತ್ಯವನ್ನು ನುಡಿಯದ, ನುಡಿದಂತೆ ನಡೆದ ಅಸಾಮಾನ್ಯ ಮಾನವಕುಲತಿಲಕ ಶ್ರೀರಾಮ. ಮಾನವ ಹೇಗೆ ಜೀವನ ನಡೆಸಬೇಕೆಂದು ತಿಳಿಯ ಪಡಿಸಿದ ವ್ಯಕ್ತಿ. ಶ್ರೀರಾಮ ಸುಖ ಬಂದಾಗ ಹಿಗ್ಗಲಿಲ್ಲ ಮತ್ತು ದುಃಖ ಬಂದಾಗ ಕುಗ್ಗಲಿಲ್ಲ. ಶ್ರೀರಾಮನ ವ್ಯಕ್ತಿತ್ವದ ಮಹಿಮೆಯನ್ನು ವಾಲ್ಮೀಕಿ ರಾಮಾಯಣವೆಂಬ ಆದಿಕಾವ್ಯವೇ ಅಲ್ಲದೆ ಅದೆಷ್ಟು ರಾಮಾಯಣಗಳು, ಕಾವ್ಯಗಳು, ಸ್ತೋತ್ರಗಳು ಕೊಂಡಾಡಿವೆ!

ಶ್ರೀರಾಮನ ಸ್ವಭಾವದಲ್ಲಿ ಬೇರೂರಿದ್ದ ಕೆಲವು ಗುಣಗಳು ಯಾರ ಮನಸ್ಸನ್ನು ತಾನೆ ಸೂರೆಗೊಳ್ಳುವುದಿಲ್ಲ? ಸತ್ಯಭಾಷಿ, ಮಿತಭಾಷಿ ಹಾಗೂ ಹಿತಭಾಷಿ. ಗುರುಹಿರಿಯರಲ್ಲಿ ಅತ್ಯಂತ ವಿನಮ್ರನಾಗಿ ನಡೆದುಕೊಳ್ಳುವ ವ್ಯಕ್ತಿ. ಧರ್ಮಶಿಕ್ಷಕ. ಅಪಾರ ಕರುಣಾಸಾಗರ. ಸಕಲರಿಗೂ ಆನಂದದಾಯಕ. ಅವನ ನಡೆ ನುಡಿಗಳು ಅಮೋಘವಾದವು. ಕೊಟ್ಟ ಭಾಷೆಯನ್ನು ಎಂದೂ ಹಿಂದೆ ತೆಗೆದುಕೊಂಡವನಲ್ಲ. ಆಚಾರ್ಯತ್ರಯರ ಮಧ್ಯೆ ವಿರಾಜಿಸುವ ಶ್ರೀಮದ್ ರಾಮಾನುಜರು ತಾವು ಬರೆದ ಗದ್ಯತ್ರಯದಲ್ಲಿ ಒಂದಾದ 'ಶರಣಾಗತಿ ಗದ್ಯ'ದಲ್ಲಿ ವಾಲ್ಮೀಕಿ ರಾಮಾಯಣದ ವಾಕ್ಯವನ್ನೇ ಉದ್ಧರಿಸಿ, ಶ್ರೀರಾಮನನ್ನು ಹೀಗೆ ವರ್ಣಿಸಿದ್ದಾರೆ: **ಅನೃತಂ ನೋಕ್ತಪೂರ್ವಂ ಮೇ, ನ ಚ ವಕ್ಷ್ಯೇ ಕದಾಚನ**—ಅಂದರೆ "ನಾನು ಶ್ರೀರಾಮ, ದಶರಥ ಪುತ್ರ, ಹಿಂದೆ ಎಂದೂ ಸುಳ್ಳಾಡಿದವನಲ್ಲ ಮತ್ತು ಮುಂದೆಯೂ ಸಹ ಸುಳ್ಳು ಆಡುವವನಲ್ಲ." **ರಾಮೋ ದ್ವಿಃ ನ ಅಭಿಭಾಷತೇ**—ಅಂದರೆ ಶ್ರೀರಾಮನು ಎಂದೂ ಎರಡು ಮಾತುಗಳನ್ನಾಡುವವನಲ್ಲ.

ಶ್ರೀರಾಮನ ವ್ಯಕ್ತಿತ್ವ ಎಷ್ಟು ಘನವಾದದ್ದು ಎಂದರೆ ಅವನ ಪಾದಸ್ಪರ್ಶದಿಂದಲೇ ಪಾಪಗ್ರಸ್ತವಾದ ಜಡವಾದ ಕಲ್ಲೂ ಸಹ



ಜೀವ ಬಂದು ಮಾನವ ಸ್ವರೂಪ ತಾಳಿತು. ಗೌತಮ ಮಹರ್ಷಿಯ ಪತ್ನಿ ಅಹಲ್ಯೆಯು ಮಹರ್ಷಿಯ ಶಾಪದಿಂದ ಜಡವಾದ ಕಲ್ಲಾಗಿ ಪರಿವರ್ತನೆಗೊಂಡು, ಅನೇಕಾನೇಕ ವರ್ಷ ಶ್ರೀರಾಮನ ಆಗಮನಕ್ಕಾಗಿ ಪರಿತಪಿಸುತ್ತಿದ್ದಳು. ಈ ಸನ್ನಿವೇಶವನ್ನು ಶ್ರೀರಾಮಾನುಜಾಚಾರ್ಯರ ಆಪ್ತ ಶಿಷ್ಯರಾದ ಕೂರೇಶ ಆಳ್ವಾರರು ತಮ್ಮ 'ಶ್ರೀನಾರಾಯಣಾಷ್ಟಕಂ' ನಲ್ಲಿ ಅತ್ಯಂತ ಮನೋಹರವಾಗಿ ವರ್ಣಿಸಿದ್ದಾರೆ.

ಯತ್ಪಾದಾಬ್ಜನಖೋದಕಂ ತ್ರಿಜಗತಾಂ ಪಾಪೌಘ-ವಿಧ್ವಂಸನಂ
ಯನ್ನಾಮಾಮೃತ-ಪೂರಕಂ ಚ ಪಿಬತಾಂ ಸಂಸಾರ-ಸಂತಾರಕಂ ।
ಪಾಷಾಣೋಪಿ ಯದಂಘ್ರಿ-ಪದ್ಮರಜಸಾ
ಶಾಪಾನ್ಮನೇರ್ಮೋಚಿತೋ
ಆರ್ತತ್ರಾಣ-ಪರಾಯಣ ಸ ಭಗವಾನ್
ನಾರಾಯಣೋ ಮೇ ಗತಿಃ ॥

"ಯಾರ ಪಾದದಿಂದ ಉದಿಸಿದ ಗಂಗೆಯು ಮೂರು ಲೋಕಗಳನ್ನೂ ಪಾವನಗೊಳಿಸಿವೆಯೋ, ಯಾರ ಅಮೃತಸಮವಾದ ಹೆಸರು ಸಂಸಾರಸಾಗರವನ್ನು ದಾಟಿಸುವುದೋ, ಪದ್ಮದಂತೆ ಮೃದುವಾದ ಯಾರ ಪಾದಧೂಳಿಯಿಂದ ಕಲ್ಲೂ ಕೂಡ ಶಾಪ

ಶ್ರೀರಾಮಚಂದ್ರನ ಹುಟ್ಟಿದ ದಿನವನ್ನು ಚೈತ್ರ ಮಾಸದಲ್ಲಿ ಆಚರಿಸುತ್ತಾರೆ. ಚಾಂದ್ರಮಾನ ಪದ್ಧತಿ ಪ್ರಕಾರ ಅವನ ಹುಟ್ಟಿದ ದಿನ ನವಮಿ ತಿಥಿಯಂದು ಆಚರಿಸಲ್ಪಡುತ್ತದೆ. ಸೌರಮಾನ ಪದ್ಧತಿ ಪ್ರಕಾರ ಅವನ ಹುಟ್ಟಿದ ದಿನ ಚೈತ್ರ ಮಾಸದ ಪುನರ್ವಸು ನಕ್ಷತ್ರದಂದು, ಇದೇ ತಿಂಗಳು ೧೮ರಂದು, ಆಚರಿಸಲ್ಪಡುತ್ತದೆ. ಶ್ರೀರಾಮನ ವ್ಯಕ್ತಿತ್ವದ ಕೆಲವು ಅಂಶಗಳ ಮೇಲೆ ಬೆಳಕು ಚೆಲ್ಲಿರುವ ಪ್ರೊ.ಎಂ.ಎನ್. ಗೋಪಾಲನ್ ಅವರು ಮೈಸೂರು ನಿವಾಸಿ.

ವಿಮೋಚನೆ ಹೊಂದಿತೋ, ಅಂತಹ ಆರ್ತಜನರ ರಕ್ಷಕ ಭಗವಾನ್ ನಾರಾಯಣನೇ ನನಗೆ ಗತಿ."

ಶ್ರೀರಾಮನ ಪಾದಸ್ಪರ್ಶದಿಂದಲೇ ಅಹಲ್ಯೆಯು ಶಾಪಮುಕ್ತಳಾದಳೆಂದರೆ, ಅವನೊಂದಿಗೆ ಓಡಾಡಿದ, ಅವನ ಮಾತಿನಿಂದ ಸಂತಸಗೊಂಡ ಅಯೋಧ್ಯೆಯ ಜನರು ಎಷ್ಟು ಪುಣ್ಯವಂತರಿರಬೇಕು! ತ್ರಿಲೋಕದಲ್ಲಿಯೂ ಸಹ ಅವನ ನಾಮಸ್ಮರಣೆಯು ಸಕಲಪಾಪ ಪರಿಹಾರ ಮಾಡುವಂತಹುದು.

ಶ್ರೀರಾಮ ಅತ್ಯಂತ ಕರುಣಾಮಯಿ. ಅವನು ಸಕಲ ಜೀವರಾಶಿಗಳಲ್ಲಿಯೂ ಭೇದ-ಭಾವವಿಲ್ಲದೆ ಪ್ರೀತಿ ಮತ್ತು ವಿಶ್ವಾಸಗಳನ್ನು ತೋರುತ್ತಿದ್ದ. ಇದಕ್ಕೆ ಪಕ್ಷಿಗಳಾದ ಕಾಕಾಸುರ ಮತ್ತು ಜಟಾಯುಗಳೇ ಸಾಕ್ಷಿ ಎನ್ನಬಹುದು. ಶ್ರೀರಾಮ ತನ್ನ ಪತ್ನಿ ಸೀತೆ ಮತ್ತು ಸೋದರ ಲಕ್ಷ್ಮಣನ ಜೊತೆಯಲ್ಲಿ ವನವಾಸದಲ್ಲಿದ್ದಾಗ ಕಾಕಾಸುರ ಸೀತೆಗೆ ಅತ್ಯಂತ ಹಿಂಸೆ ಕೊಡಲಾರಂಭಿಸಿದ. ಇದನ್ನು ಗಮನಿಸಿದ ಶ್ರೀರಾಮ ಅತ್ಯಂತ ಕ್ರುದ್ಧನಾಗಿ ಕಾಕಾಸುರನ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ. ಆ ಬ್ರಹ್ಮಾಸ್ತ್ರದಿಂದ ಕಾಕಾಸುರ ಮೂರು ಲೋಕಗಳನ್ನು ಸುತ್ತಿದರೂ ತಪ್ಪಿಸಿಕೊಳ್ಳಲಾಗಲಿಲ್ಲ. ಕೊನೆಗೆ ಸೀತಾದೇವಿಯನ್ನೇ ಮೊರೆಹೊಕ್ಕು, ಆಕೆಯ ಸೂಚನೆಯಂತೆ ಶ್ರೀರಾಮನಲ್ಲಿ ಶರಣಾಗಿ ತನ್ನ ಜೀವವನ್ನು ಉಳಿಸಿಕೊಂಡ.

ಸೀತಾದೇವಿಯ ಅನ್ವೇಷಣೆಯಲ್ಲಿ ಜಟಾಯುವಿನ ಪಾತ್ರ ಅತ್ಯಂತ ಮಹತ್ವವಾದದ್ದು. ರಾವಣನು ಸೀತೆಯನ್ನು ಬಲಾತ್ಕಾರದಿಂದ ತನ್ನ ಪುಷ್ಪಕ ವಿಮಾನದಲ್ಲಿ ಲಂಕೆಯತ್ತ ಕೊಂಡೊಯ್ಯುತ್ತಿದ್ದುದನ್ನು ಜಟಾಯು ನೋಡಿ, ರಾವಣನ ಮೇಲೆರಗಿ ಅವನನ್ನು ತನ್ನ ಕೊಕ್ಕು ಮತ್ತು ಉಗುರುಗಳಿಂದ ಆಕ್ರಮಣ ಮಾಡಿದ. ರಾವಣ ಅತ್ಯಂತ ಕ್ರೋಧಗೊಂಡು, ಜಟಾಯುವಿನ ರೆಕ್ಕೆಗಳನ್ನು ಕತ್ತರಿಸಿ ಹಾಕಿದ. ಕೂಡಲೇ ಜಟಾಯುವು ಭೂಮಿಯ ಮೇಲೆ ಬಿದ್ದ. ಮೊದಲೇ ವೃದ್ಧನಾಗಿದ್ದ ಜಟಾಯುವಿಗೆ ಮತ್ತೆ ಮೇಲೆ ಏಳಲಾಗದಿದ್ದರೂ ಶ್ರೀರಾಮ ಬರುವವರೆಗೂ ಜೀವವನ್ನು ಹಿಡಿದುಕೊಂಡು ಕಾದಿದ್ದ. ಶ್ರೀರಾಮ ಮತ್ತು ಲಕ್ಷ್ಮಣ ಸೀತಾನ್ವೇಷಣೆ ಮಾಡುತ್ತಾ ಜಟಾಯುವಿದ್ದೆಡೆ ಬಂದರು. ಜಟಾಯುವಿನ ಸ್ಥಿತಿಯನ್ನು ನೋಡಿ ಶ್ರೀರಾಮ ಬಹಳ ಪರಿತಪಿಸಿದ. ಜಟಾಯುವು ಶ್ರೀರಾಮನಿಗೆ ತಾನು ನೋಡಿದ ಪ್ರಸಂಗವನ್ನು ಮತ್ತು ತಾನು ವಿರೋಧಿಸಲು ಪಟ್ಟ ಪ್ರಯತ್ನವನ್ನು ಹೇಳಿ ಅನಂತರ ಪ್ರಾಣ ತ್ಯಾಗ ಮಾಡಿದ. ಶ್ರೀರಾಮ ಜಟಾಯುವಿಗೆ ಅಂತ್ಯ ಸಂಸ್ಕಾರ ಮಾಡಿದ. ಕರುಣಾಮಯ ಶ್ರೀರಾಮನಿಂದ ಜಟಾಯುವಿಗೆ ಸ್ವರ್ಗ ಪ್ರಾಪ್ತಿಯಾಯಿತು.

ಶ್ರೀರಾಮಾನುಜಾಚಾರ್ಯರು ತಮ್ಮ ಗದ್ಯತ್ರಯದ ಮೂರನೆಯ ಗದ್ಯವಾದ **ಶರಣಾಗತಿ ಗದ್ಯ**ದಲ್ಲಿ ಪರಮಾತ್ಮನನ್ನು **ಅಪಾರ ಕರುಣಾಂಬುಧೇ, ಅನಾಲೋಚಿತ ವಿಶೇಷ-ಅಶೇಷ-ಲೋಕಶರಣ್ಯ, ಪ್ರಣತಾರ್ತಿಹರ** ಎಂದು ಕೊಂಡಾಡಿದ್ದಾರೆ.

ಮುಂದೆ ಸುಗ್ರೀವನ ಪ್ರಸಂಗದಲ್ಲಿ ವಾಲಿಸಂಹಾರದ ನಂತರ, ಶ್ರೀರಾಮನಿಗೆ ಸೀತೆಯನ್ನು ಹುಡುಕಿಸಿಕೊಡಲು ನೆರವಾಗುವುದಾಗಿ ಭಾಷೆಕೊಟ್ಟು ಸುಗ್ರೀವ ಹೊಸದಾಗಿ ಪಡೆದ ರಾಜ್ಯಸುಖದಲ್ಲಿ ಮೈಮರೆಯುತ್ತಾನೆ. ಶ್ರೀರಾಮ ಸಾಕಷ್ಟು ಕಾದುನೋಡಿ, ಕೊನೆಗೆ ತನ್ನ ತಮ್ಮ ಲಕ್ಷ್ಮಣನಿಗೆ ಸುಗ್ರೀವನು ತನ್ನ ಭಾಷೆ ಉಳಿಸಿಕೊಳ್ಳುವಂತೆ ನೆನಪಿಸುವಂತೆ ತಿಳಿಸುತ್ತಾನೆ. ಲಕ್ಷ್ಮಣನ ಆಗಮನದಿಂದ ಸುಗ್ರೀವ ತತ್ತರಿಸಿಹೋಗುತ್ತಾನೆ. ಶ್ರೀರಾಮನನ್ನು ನೋಯಿಸಿದ್ದ ಅಪರಾಧವನ್ನು ಮನ್ನಿಸುವಂತೆ ಸುಗ್ರೀವನು ಶ್ರೀರಾಮನಲ್ಲಿ ಕ್ಷಮೆಯಾಚಿಸುತ್ತಾನೆ. ಅಪಾರ ಕರುಣಾಸಿಂಧುವಾದ ಶ್ರೀರಾಮನಿಗೆ ಸುಗ್ರೀವನನ್ನು ಕ್ಷಮಿಸಲು ಕಷ್ಟವಾಗಲಿಲ್ಲ.

ಇನ್ನು ವಿಭೀಷಣನ ಪ್ರಸಂಗದಲ್ಲಿ, 'ಮೊರೆಹೊಕ್ಕವರ ಕಾವ ಬಿರುದಿಗೆ' ಸಲ್ಲುವಂತೆ ಅವನಿಗೆ ಆಶ್ರಯವನ್ನು ನೀಡಿ, ಯುದ್ಧದಲ್ಲಿ ಗೆದ್ದನಂತರ ಅವನನ್ನು ಲಂಕಾಧಿಪತಿಯನ್ನಾಗಿ ಮಾಡಿದ. ಈ ಸನ್ನಿವೇಶ **ಆರ್ತತ್ರಾಣ ಪರಾಯಣ ಸ ಭಗವಾನ್ ನಾರಾಯಣೋ ಮೇ ಗತಿಃ** ಎಂದು ಮೇಲೆ ಹೇಳಲಾಗಿರುವ ಮಾತಿಗೆ ನಿದರ್ಶನ.

ಶ್ರೀರಾಮನನ್ನು ಆರಾಧಿಸುವ ಭಕ್ತರ ಸಂಖ್ಯೆ ಅಪಾರ. ಸಂತ ತ್ಯಾಗರಾಜರು ಶ್ರೀರಾಮಚಂದ್ರನ ಪರಮಭಕ್ತರು. ಅವರು ಶ್ರೀರಾಮನನ್ನು ಕುರಿತು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಪ್ರತಿಯೊಂದು ಕೀರ್ತನೆಯಲ್ಲಿಯೂ ತ್ಯಾಗರಾಜರು ಶ್ರೀರಾಮನ ಮೇಲೆ ಇಟ್ಟಿದ್ದ ಅನನ್ಯ ಭಕ್ತಿಯನ್ನು ನಾವು ಗಮನಿಸಬಹುದು. ಅವರು ರಚಿಸಿರುವ ಪ್ರತಿಯೊಂದು ಕೀರ್ತನೆಯೂ ಭಗವಂತನ ಗುಣಗಾನ ಮಾಡುತ್ತದೆ. ತಮ್ಮ ಅಮೋಘ ಕೀರ್ತನೆಗಳ ಮೂಲಕ ಅವರು ಶ್ರೀರಾಮನನ್ನು ಒಲಿಸಿಕೊಂಡಿದ್ದರು. ಎಷ್ಟಾದರೂ ಭಗವಂತ ಭಕ್ತಪರಾಧೀನ ಅಲ್ಲವೇ? ಭಕ್ತನ ನಿಷ್ಕಳಂಕ ಕೂಗಿಗೆ ಓಗೊಡುವುದು ಭಗವಂತನ ಆದ್ಯ ಕರ್ತವ್ಯ. ತ್ಯಾಗರಾಜರ ಕೀರ್ತನೆಗಳಲ್ಲಿ ವೇದ, ಶಾಸ್ತ್ರ, ಪುರಾಣಗಳ ಸಾರ ಅಡಗಿದೆ. ಅವರ ಹೆಚ್ಚಿನ ಕೀರ್ತನೆಗಳು ಶ್ರೀರಾಮನಿಗೇ ನಿವೇದಿಸಲ್ಪಟ್ಟಿವೆ.

ಪುರಂದರದಾಸರಿಗಂತೂ ಶ್ರೀರಾಮನಾಮದ ಮಹಿಮೆಯನ್ನು ಎಷ್ಟು ಹಾಡಿದರೂ ತೃಪ್ತಿಯಿಲ್ಲ. "ರಾಮ ಎಂಬುವ ಎರಡು ಅಕ್ಷರದ ಮಹಿಮೆಯನು ಪಾಮರರು ತಾವೇನು ಬಲ್ಲರಯ್ಯ?" "ರಾಮ ಮಂತ್ರವ ಜಪಿಸೋ ಹೇ ಮನುಜ ಆ ಮಂತ್ರ ಈ ಮಂತ್ರ ನೆಚ್ಚಿ ನೀ ಕೆಡಬೇಡ, ಸೋಮಶೇಖರ ತನ್ನ ಭಾಮಿನಿಗೊರೆದಿಹ" ಮುಂತಾದ ಪದಗಳಲ್ಲಿ ರಾಮನಾಮಜಪದ ಮಹಾತ್ಮೆಯನ್ನು ಅತ್ಯಂತ ಮನೋಹರವಾದ ರೀತಿಯಲ್ಲಿ ವರ್ಣಿಸಿದ್ದಾರೆ.

ಶ್ರೀರಾಮನ ವ್ಯಕ್ತಿತ್ವದಲ್ಲಿ ಭಾರತೀಯ ಸಂಸ್ಕೃತಿಯ ಅತ್ಯಂತ ಶ್ರೇಷ್ಠವಾದ ಮೌಲ್ಯಗಳು ಜೀವಂತವಾಗಿರುವುದನ್ನು ಕಾಣಬಹುದು. ವಾಲ್ಮೀಕಿಯು ಶ್ರೀರಾಮನನ್ನು ಮರ್ಯಾದಾ ಪುರುಷೋತ್ತಮನೆಂದು ಚಿತ್ರಿಸಿ ಮನುಜನಾದವನು ಹಂಬಲಿಸಬೇಕಾದ ಆದರ್ಶವನ್ನು ನಮ್ಮ ಮುಂದಿರಿಸಿದ್ದಾರೆ.

**ಶ್ರೀರಾಮಚಂದ್ರನು** ಎಲ್ಲರಿಗೂ ಸುಖಶಾಂತಿಯನ್ನು ಕೊಟ್ಟು, ಎಲ್ಲೆಲ್ಲೂ ಪ್ರೀತಿ ವಿಶ್ವಾಸವನ್ನು ಹರಡಲಿ ಎಂದು ಪ್ರಾರ್ಥಿಸೋಣ.